**ದಿನಾಂಕಃ 17.08.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಎಂ.ಎ. ವಕೀಲರಿಂದಃ**

7. ನನ್ನ ಗಂಡ ಮೃತಪಟ್ಟ ದಿನದಂದೇ ನಾನಾಗಲಿ, ನನ್ನ ಕುಟುಂಬದವರಾಗಲಿ ದೂರನ್ನು ನೀಡಿಲ್ಲ. ನನ್ನ ಹೇಳಿಕೆಯನ್ನು ಸಕಲೇಶಪುರದ ಇನ್ಸಿಪೆಕ್ಟರ್ ರವರು ಪಡೆದುಕೊಂಡಿರುತ್ತಾರೆ. ನನ್ನ ಹೇಳಿಕೆಯನ್ನು ಎಷ್ಟು ಗಂಟೆಯಿಂದ ಎಷ್ಟುಯವರೆಗೆ ಪಡೆದುಕೊಂಡರು ಎಂದು ಸಮಯ ಹೇಳಲಾಗುವುದಿಲ್ಲ. ದಿನಾಂಕ 17.01.2023ಕ್ಕಿಂತ ಹಿಂದೆ ನಾನು ದೂರನ್ನು ನೀಡಿರುವುದಿಲ್ಲ, ಆದರೆ ದೂರು ನೀಡಲು ಠಾಣೆಗೆ ಹೋಗಿದ್ದೆನು. ಪೊಲೀಸರು ನಿನ್ನ ಗಂಡನಿಗೆ ತೊಂದರೆ ಆದಾಗ ಬನ್ನಿ ದೂರನ್ನು ಪಡೆದುಕೊಳ್ಳುತ್ತೇವೆ ಎಂದು ವಾಪಸ್ಸು ಕಳುಹಿಸಿದರು. ನಾನು ಸಕಲೇಶಪುರದ ಮಾರ್ಕೇಟಿನ ಹಿಂಭಾಗದಲ್ಲಿರುವ ಪೊಲೀಸ್ ಠಾಣೆಗೆ ದೂರನ್ನು ನೀಡಲು ಹೋಗಿದ್ದೆವು. ಸದರಿ ಪೊಲೀಸ್ ಠಾಣೆ ಗ್ರಾಮಾಂತರ ಠಾಣೆಯೋ ಅಥವಾ ನಗರ ಠಾಣೆಯೋ ಗೊತ್ತಿಲ್ಲ. ದೂರನ್ನು ಪಡೆಯಲು ಅಲ್ಲಿನ ಇನ್ಸಿಪೆಕ್ಟರ್ ರವರು ನಿಮ್ಮ ಗಂಡನಿಗೆ ತೊಂದರೆ ಆದರೆ ಬನ್ನಿ ಎಂದು ವಾಪಸ್ಸು ಕಳುಹಿಸಿರುತ್ತಾರೆ. ದೂರನ್ನು ನೀಡಲು ನಾನು ಮತ್ತು ನನ್ನ ಮಗ ಹೋಗಿದ್ದೆವು. ಆ ರೀತಿ ವಾಪಸ್ಸು ಕಳುಹಿಸಿದ ಬಳಿಕ ಸದರಿ ವಿಚಾರವನ್ನು ಪೊಲೀಸ್ ಮೇಲಾಧಿಕಾರಿಗಳಿಗೆ ಭೇಟಿ ಮಾಡಿ ತಿಳಿಸಿರುವುದಿಲ್ಲ.

8. ಘಟನೆ ಆಗುವುದಕ್ಕಿಂತ 4 ತಿಂಗಳ ಮೊದಲು ಆರೋಪಿ ನನ್ನ ಗಂಡನಿಗೆ ಕಿರುಕುಳ ನೀಡುತ್ತಿದ್ದ ಬಗ್ಗೆ ದೂರನ್ನು ನೀಡಿರುವುದಿಲ್ಲ, ಸಾಕ್ಷಿ ಖುದ್ದಾಗಿ ಆರೋಪಿ ಬೆದರಿಕೆ ಹಾಕಿದ ಕಾರಣ ದೂರನ್ನು ನೀಡಿರಲಿಲ್ಲ ಎಂದು ಹೇಳುತ್ತಾರೆ. ನಾನು ಈಗ ಹೇಳಿದ ಸದರಿ

ಸಂಗತಿ ಸುಳ್ಳುಯಿಂದ ಕೂಡಿದೆ ಎಂದು ಸೂಚಿಸಿರುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಬೈದಿರುವುದು ತಪ್ಪು ಎಂದು ತಿಳಿದಮೇಲೂ ಹತ್ತಿರದ ಪೊಲೀಸ್ ಠಾಣೆಗೆ ದೂರವಾಣಿ ಮೂಲಕ ಅಥವಾ ಖುದ್ದಾಗಿ ಹೋಗಿ ದೂರನ್ನು ಸಲ್ಲಿಸಿರುವುದಿಲ್ಲ.

9. ನನ್ನ ಗಂಡ ಹೊಸೂರು ಎಸ್ಟೇಟ್ ಬಳಿ ವಿಷ ಕುಡಿದ ಬಗ್ಗೆ ಪೊಲೀಸರು ಸದರಿ ಹೊಸೂರು ಎಸ್ಟೇಟ್ ಬಳಿ ಪಂಚನಾಮೆ ಮಾಡಿರುವುದಿಲ್ಲ, ಆದರೆ ಉಳಿದ ವಿಷ ಅಂಗಡಿ ಬಳಿ ಕುಡಿದ ಬಗ್ಗೆ ಮಾಡಿರುತ್ತಾರೆ. ದಿಃ 23.01.2023ರಂದು ಅಂಗಡಿಯ ಬಳಿ ಪೊಲೀಸರು ಪಂಚನಾಮೆ ಮಾಡಿರುತ್ತಾರೆ. ಇಬ್ಬರು ಪೊಲೀಸರು ಪಂಚನಾಮೆಗಾಗಿ ಬಂದಿದ್ದರು. ಆ ಪೊಲೀಸರು ಲಿಖಿತ ನೋಟೀಸನ್ನು ನೀಡಿರಲಿಲ್ಲ, ಬದಲಾಗಿ ದೂರವಾಣಿ ಮೂಲಕ ಮೌಖಿಕವಾಗಿ ಹೇಳಿದ್ದರು. ಆ ಪೊಲೀಸರು ಬಂದಾಗ ಮಧ್ಯಾಹ್ನ ಆಗಿದ್ದು ಸಮಯ ಹೇಳಲಾಗುವುದಿಲ್ಲ. ಪೊಲೀಸರು ಪಂಚನಾಮೆಯನ್ನು 1 ರಿಂದ 2 ಗಂಟೆಗಳ ಕಾಲ ಮಾಡಿರುತ್ತಾರೆ. ಆ ಸಮಯದಲ್ಲಿ ಇಬ್ಬರು ವ್ಯಕ್ತಿಗಳು ಹಾಜರಿದ್ದರು. ಅವರು ಸ್ಥಳೀಯರೋ ಅಲ್ಲವೋ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಸ್ಥಳೀಯರನ್ನು ವಿಚಾರಣೆ ಮಾಡಿರುವುದಿಲ್ಲ. ಪಂಚನಾಮೆ ಮಾಡುವ ಸಮಯದಲ್ಲಿ ಸ್ಥಳೀಯರು ಹಾಜರಿರಲಿಲ್ಲ. ಕೃತ್ಯ ಸ್ಥಳದ ಅಂಗಡಿಯ ಬಳಿ ಹಾಗೂ ಅಕ್ಕಪಕ್ಕದ ವಾಸದ ಮನೆ ಇದ್ದು ಆದರೂ ಸಹ ಪೊಲೀಸರು ಅಂಗಡಿಯ ಮುಂದೆ ಪಂಚನಾಮೆ ಮಾಡಿದ್ದಾರೆ ಸ್ಥಳೀಯರು ಹಾಜರಿರಲಿಲ್ಲ ಎಂದು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಆ ಅಂಗಡಿಯ ಬಳಿ ಪಂಚನಾಮೆ ಮಾಡುವ ಸಮಯದಲ್ಲಿ ಪೊಲೀಸರು ವಿಷದ ಬಾಟಲಿಯನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ವಿಷದ ಬಾಟಲಿಯ ಮೇಲೆ ಇಂಗ್ಲೀಷ್ ನಲ್ಲಿ

ಬರೆದಿದ್ದು ಅದನ್ನು ನನಗೆ ಹೇಳಲು ಬರುವುದಿಲ್ಲ, ಆದರೆ ಅದರ ಮೇಲೆ ಚಿತ್ರ ಇತ್ತು. ಸದರಿ ವಿಷದ ಬಾಟಲಿಯ ಮೇಲೆ ಆನೆಯ ರೀತಿಯ ಚಿತ್ರ ಇತ್ತು. ಸದರಿ ವಿಷದ ಬಾಟಲಿಯನ್ನು ಪೊಲೀಸರು ಅಂಗಡಿಯ ಮುಂದೆ ಇರುವುದನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ವಿಷದ ಬಾಟಲಿಯ ಮುಚ್ಚುಳ ಬಿಚ್ಚಿತ್ತು. ಅದನ್ನು ಪೊಲೀಸರು ಅಮಾನತ್ತುಮಾಡಿಕೊಳ್ಳುವಾಗ ವಿಷದ ಮುಚ್ಚುಳವನ್ನು ಅದಕ್ಕೆ ಹಾಕಿ ಅಮಾನತ್ತು ಮಾಡಿಕೊಂಡಿರುತ್ತಾರೆ. ಸದರಿ ಮು.ಮಾ–1 ವಿಷದ ಬಾಟಲಿಯನ್ನು ಅಮಾನತ್ತುಪಡಿಸಿಕೊಂಡ ಸಮಯದಲ್ಲಿ ಪೊಲೀಸರು ನನ್ನ ಸಹಿಯನ್ನು ಪಡೆದುಕೊಂಡರು. ಮು.ಮಾ–1 ಸಾಮಾನ್ಯವಾಗಿ ಗೊಬ್ಬರದ ಅಂಗಡಿಗಳಲ್ಲಿ ಹಾಗೂ ಜಮೀನುಗಳಲ್ಲಿ ಸಾಮಾನ್ಯವಾಗಿ ಸಿಗುತ್ತವೆ ಎಂಬ ಪ್ರಶ್ನೆಗೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಮು.ಮಾ–1 ಅಂಗಡಿಯ ಮುಂದೆ ಇರಲಿಲ್ಲ, ಅದನ್ನು ನಾನೇ ಸೃಷ್ಠಿ ಮಾಡಿ ಪೊಲೀಸರಿಗೆ ನೀಡಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಮು.ಮಾ–1ಕ್ಕೆ ಸಂಬಂಧಿಸಿದಂತೆ ಮಾಡಿದ ಪಂಚನಾಮೆಗೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದು ಸೂಚಿಸುವುದು ಎಂದರೆ ಸರಿಯಲ್ಲ, ಅಂಗಡಿಯ ಮುಂದೆ ಸಹಿ ಮಾಡಿದ್ದೇನೆ. ಸದರಿ ಅಮಾನತ್ತು ಪಂಚನಾಮೆ ಸಮಯದಲ್ಲಿ ಇಬ್ಬರು ವ್ಯಕ್ತಿಗಳಿಗೆ ಪೊಲೀಸರು ನನ್ನ ಸಮಕ್ಷಮ ಲಿಖಿತ ನೋಟೀಸು ನೀಡಲಿಲ್ಲ.

10. ನನ್ನ ಗಂಡನಿಗೆ ಸಂಬಂಧಿಸಿದ ಮಂಗಳ ಆಸ್ಪತ್ರೆ, ಫಾದರ್ ಮುಲ್ಲಾರ್ ಆಸ್ಪತ್ರೆ ಹಾಗೂ ಇತರೆ ಆಸ್ಪತ್ರೆಗಳ ಡಿಸ್ ಚಾರ್ಜ್ ಸಮ್ಮರಿಗಳನ್ನು ಪೊಲೀಸರಿಗೆ ನೀಡಿದ್ದೆನು. ಆ ರೀತಿ ಸದರಿ ಡಿಸ್ ಚಾರ್ಜ್ ಸಮ್ಮರಿಗಳನ್ನು ನೀಡಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಆಸ್ಪತ್ರೆಯ MLC ರಿಜಿಸ್ಟರಿನಲ್ಲಿ ನನ್ನ ಗಂಡ ಸ್ವತಃ ವಿಷ ಕುಡಿದು ಆತ್ಮಹತ್ಯೆ

ಮಾಡಿಕೊಂಡಿದ್ದಾನೆ ಎಂದು ಬರೆದಿದ್ದ ಕಾರಣ ನನ್ನ ಗಂಡನ ಡಿಸ್ ಚಾರ್ಜ್ ಸಮ್ಮರಿಗಳನ್ನು ಪೊಲೀಸರಿಗೆ ನೀಡದೇ ಇದ್ದರೂ ಸಹ ನೀಡಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಫಾದರ್ ಮುಲ್ಲಾರ್ ಆಸ್ಪತ್ರೆಗೆ ಪೊಲೀಸರು ನನ್ನ ಗಂಡ ಸತ್ತು ಹೋದ ದಿನದಂದು ಸಂಜೆ ಬಂದಿದ್ದರು. ಪೊಲೀಸರು ಸದರಿ ಫಾದರ್ ಮುಲ್ಲಾರ್ ಆಸ್ಪತ್ರೆಗೆ ನನ್ನ ಮಗ ದೂರು ನೀಡಿದ ಬಳಿಕ ಬಂದಿದ್ದರು ಎಂದು ಸೂಚಿಸುವುದು ಸರಿ.

11. ನನಗೆ ಇಬ್ಬರು ಮಕ್ಕಳು. ನನ್ನ ಇಬ್ಬರು ಮಕ್ಕಳ ಬಳಿ ಪೋನ್ ಇದೆ. ಪೊಲೀಸರು ನನ್ನ ಮಕ್ಕಳ ಮೊಬೈಲನ್ನು ಕೇಳದೇ ಇರುವ ಕಾರಣ ತನಿಖೆಗಾಗಿ ನನ್ನ ಮಕ್ಕಳ ಇಬ್ಬರ ಮೊಬೈಲುಗಳನ್ನು ನೀಡಿರುವುದಿಲ್ಲ. ನನ್ನ ಮಕ್ಕಳು ಇಬ್ಬರು ಕೂಲಿ ಕೆಲಸ ಮಾಡುತ್ತಾರೆ. ನನ್ನ ಗಂಡ ಆತ್ಮಹತ್ಯೆ ಮಾಡಿಕೊಂಡು ಮೃತಪಡುವ ಸಮಯದಲ್ಲಿ ನಾನು ಮತ್ತು ನನ್ನ ಮಗ ಚಾಸಾ-1 ಅಂಗಡಿಯ ಬಳಿಯೇ ಇದ್ದೆವು. ಆಗ ಸಮಯ 7.00 ಗಂಟೆ ಆಗಿತ್ತು. ನನ್ನ ಗಂಡನಿಗೆ ಮಂಗಳ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುವ ಸಮಯದಲ್ಲಿ ನಾನು ಮತ್ತು ನನ್ನ ಕುಟುಂಬದವರು ಎಲ್ಲರು ಇದ್ದೆವು.

12. ನನಗೆ ಪಂಚನಾಮೆ ಮಾಡಿದ ಸ್ಥಳದ ಚಕ್ಕುಬಂದಿ ಹೇಳಲಾಗುವುದಿಲ್ಲ. ದಿಃ 05.01.2023ರಂದು ನನ್ನ ಗಂಡ ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನನ್ನ ಗಂಡ ಮೃತಪಡುವ 4 ತಿಂಗಳ ಹಿಂದೆ ಅಂಗಡಿ ಖಾಲಿ ಮಾಡುವಂತೆ ಆರೋಪಿ ಯಾವುದೇ ರೀತಿಯಲ್ಲೂ ಕಿರುಕುಳ ನೀಡಿಲ್ಲ ಎಂದು ಸೂಚಿಸುವುದು ಸರಿಯಲ್ಲ. ದಿಃ 02.01.2023ರಂದು ನನ್ನ ಗಂಡ ವ್ಯಾಪಾರ ಮಾಡುತ್ತಿದ್ದ ಅಂಗಡಿಯ ಬಳಿಗೆ ಆರೋಪಿ ಹೋಗಿ ಅವಾಚ್ಯ ಶಬ್ದಗಳಿಂದ

ಬೈದಿರುವುದು ಸುಳ್ಳು ಎಂದು ಸೂಚಿಸುವುದು ಸರಿಯಲ್ಲ. ಆರೋಪಿಯು ನನ್ನ ಗಂಡನಿಗೆ ನಿನ್ನ ಹೆಂಡತಿಯನ್ನು ಅಂಗಡಿಯ ಬಳಿ ಕರೆದುಕೊಂಡು ಬಂದು ತಲೆ ಹಿಡಿದುಕೊಡು ಎಂದು ಅಂಗಡಿಯ ಗಿರಾಕಿಯ ಮುಂದೆ ಅಪಮಾನ ಮಾಡಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

13. ನನಗೆ ಚಾಸಾ-4 ರಿಂದ 7ರವರು ಗೊತ್ತು ಎಂದು ಸೂಚಿಸಿರುವುದು ಸರಿಯಲ್ಲ, ನನಗೆ ಗೊತ್ತಿರುವುದಿಲ್ಲ. ನನ್ನ ಗಂಡನಿಗೆ ಆರೋಪಿಯು ಎಂದಿಗೂ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಕೊಲೆ ಬೆದರಿಕೆ ಹಾಕಿರುವುದಿಲ್ಲ ಹಾಗೂ ಮಾನಭಂಗ ಕೇಸು ಹಾಕುತ್ತೇನೆ ಎಂದು ಹೆದರಿಸಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ದೂರು ನೀಡುವ ಸಮಯದಲ್ಲಿಯೇ ಸಿಡಿ ಕೊಡಲು ಯಾವುದೋ ತೊಂದರೆ ಇರಲಿಲ್ಲ ಎಂಬ ಸೂಚನೆಗೆ ಸಾಕ್ಷಿಯು ನನ್ನ ಗಂಡ ಮೃತಪಟ್ಟ ಬಳಿಕ ಪೊಲೀಸರು ಸಿಡಿ ಮಾಡಿಸಿ ಕೊಡಿ ಎಂದು ಹೇಳಿದ ಬಳಿಕ ಸಿಡಿ ಮಾಡಿಸಿ ಕೊಟ್ಟಿರುತ್ತೇನೆ. ಸದರಿ ಸಿಡಿಯನ್ನು ನಾನೇ ಸೃಷ್ಠಿ ಮಾಡಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ದಿಃ 02.02.2023ರಂದು ಸದರಿ ಸಿಡಿಯನ್ನು ಪೊಲೀಸರಿಗೆ ನೀಡಿರುತ್ತೇನೆ. ಆ ಸಮಯದಲ್ಲಿ ನನ್ನ ಮಗ, ನನ್ನ ತಂಗಿ, ನನ್ನ ತಂಗಿಯ ಗಂಡ ಜೊತೆಯಲ್ಲಿ ಇದ್ದರು.

14. ಚಾಸಾ-11 ರಿಂದ 15ರವರು ನನ್ನ ಸಂಬಂಧಿಕರು ಎಂಬ ಸೂಚನೆಗೆ ಸಾಕ್ಷಿಯು ಚಾಸಾ-13 ನನ್ನ ಮಗ, ಚಾಸಾ-14 ಮತ್ತು 15ರವರು ನನ್ನ ತಂಗಿಯಂದಿರು ಎಂದು ಹೇಳುತ್ತಾರೆ. ನನ್ನ ಗಂಡ ವಿಪರೀತವಾಗಿ ಮಧ್ಯಪಾನ ಸೇವನೆ ಮಾಡುತ್ತಿದ್ದರು ಎಂದು ಸೂಚಿಸುವುದು ಸರಿಯಲ್ಲ. ಸದರಿ ವಿಚಾರವಾಗಿ ನನಗೂ ಮತ್ತು ಮೃತನ ನಡುವೆ

ಜಗಳವಾಗುತ್ತಿತ್ತು ಎಂದು ಸೂಚಿಸುವುದು ಸರಿಯಲ್ಲ. ನನ್ನ ಗಂಡ ಅಂಗಡಿಯಲ್ಲಿ ಕಾಡಿನ ಹಂದಿ ಮಾಂಸವನ್ನು ಮಾರಾಟ ಮಾಡುತ್ತಿದ್ದು, ಕಾರಣ ಸ್ಥಳೀಯರು ದೂರು ನೀಡಿದ್ದರು ಎಂದು ಸೂಚಿಸುವುದು ಸರಿಯಲ್ಲ. ಅದರ ಜೊತೆಯಲ್ಲಿಯೇ ಮಧ್ಯವನ್ನು ಸಹ ಮಾರಾಟ ಮಾಡುತ್ತಿದ್ದ ಎಂದು ಸೂಚಿಸುವುದು ಸರಿಯಲ್ಲ. ಸದರಿ ವಿಚಾರಕ್ಕೆ ಸಂಬಂಧಿಸಿದಂತೆ ಆರೋಪಿ ಕಾನೂನುಬಾಹಿರ ಚಟುವಟಿಕೆ ಮಾಡಬೇಡಿ ಎಂದು ನನ್ನ ಗಂಡನಿಗೂ ನನಗೂ ಸೂಚಿಸಿದ್ದರು ಸರಿಯಲ್ಲ. ಸದರಿ ವಿಚಾರಕ್ಕೆ ಸಂಬಂಧಿಸಿದಂತೆ ನನಗೂ ಮತ್ತು ಆರೋಪಿಗೂ ವೈಮನಸ್ಸು ಇತ್ತು ಎಂದು ಸೂಚಿಸುವುದು ಸರಿಯಲ್ಲ. ಸದರಿ ಕಾರಣದಿಂದಾಗಿ ಆರೋಪಿಯ ವಿರುದ್ಧ ನಾನು ಸುಳ್ಳು ಪ್ರಕರಣವನ್ನು ಮಾಡಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

15. ನನ್ನ ಗಂಡ ಹೊಸೂರು ಎಸ್ಟೇಟಿನ ಬಳಿ ವಿಷಯ ಸೇವನೆ ಮಾಡಿದ್ದರೂ ಸಹ ಅಂಗಡಿಯ ಮುಂದೆ ವಿಷ ಸೇವನೆ ಮಾಡಿದ್ದನು ಎಂದು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ನನ್ನ ಗಂಡನಿಗೆ ಮಾನಸಿಕವಾಗಿ ಹಿಂಸೆ ನೀಡುತ್ತಿದ್ದ ಕಾರಣ, ನನ್ನ ಗಂಡ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಸೂಚಿಸುವುದು ಸರಿಯಲ್ಲ. ನನ್ನ ಗಂಡ ಪೊಲೀಸರು ಹೇಳಿಕೆ ಪಡೆಯುವ ಸಮಯದಲ್ಲಿ ಆರೋಪಿಗೆ ಹೆದರಿ ನಿಜವಾಗದ ಸಂಗತಿಯನ್ನು ಮರೆಮಾಚಿ ತನಗೆ ಬೇಜಾರಾಗಿ ವಿಷ ಸೇವನೆ ಮಾಡಿರುತ್ತೇನೆ ಎಂದು ಹೇಳಿಕೆ ನೀಡಿರುತ್ತೇನೆ ಎಂದು ಪೊಲೀಸರ ಮುಂದೆ ಹೇಳಿರುತ್ತಾನೆ ಎಂದು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನ್ನ ಗಂಡನಿಗೆ ಸಾಯಲು ಯಾವುದೇ ಪ್ರಚೋದನೆ ನೀಡಿಲ್ಲ ಎಂದರೆ ಸರಿಯಲ್ಲ.

16. ನನ್ನ ಗಂಡನ ಸೇವಿಗೂ, ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದು ಸೂಚಿಸುವುದು ಸರಿಯಲ್ಲ. ಆರೋಪಿಗೂ ಹಾಗೂ ನಿಪಿ.1 ರಿಂದ 7ಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ವಿಷ ಕುಡಿಯುವ ಮೊದಲು ಅಂಗಡಿಯಲ್ಲಿ ಕುಳಿತು ಆತನಿಗೆ ಆರೋಪಿಯಿಂದ ಆಗುತ್ತಿರುವ ಕಿರುಕುಳದ ಬಗ್ಗೆ ಮೊಬೈಲ್ ನಲ್ಲಿ ವಿಡಿಯೋ ರೆಕಾರ್ಡ್ ಮಾಡಿರುತ್ತಾನೆ ಎಂದು ಹೇಳಿರುವ ವಿಚಾರ ಎಂದು ಸೂಚಿಸುವುದು ಸರಿಯಲ್ಲ. ನನ್ನ ಗಂಡ ಸಕಲೇಶಪುರದ ಒಂದು ಎಸ್ಟೇಟಿನ ಬಳಿ ವಿಷ ಕುಡಿದಿದ್ದು ನಂತರ ಅಂಗಡಿಯ ಬಳಿ ಬಂದು ಅಲ್ಲಿಯು ಸಹ ವಿಷಯ ಕುಡಿದಿದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.